ದಿನಾಂಕ 08-10-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಕೆ ಬಿ ಡಿ ವಕೀಲರಿಂದಃ**

1. ಸರ್ವೆ ನಂ. 112/ ಬ 3 ರ ಕ್ಷೇತ್ರ 01 ಎಕರೆ 03 ಗುಂಟೆ ಇದೆ ಎಂದರೆ ಸರಿ. ಸರ್ವೆ ನಂ. 112/ ಅ 1 ರ ಜಮೀನಿನ ಕ್ಷೇತ್ರ 03 ಎಕರೆ ಇದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರ ಆಸ್ತಿ ನನ್ನ ಜಮೀನಿನ ಪಕ್ಕದಲ್ಲಿದೆ. ಸರ್ವೆ ನಂ. 112/ ಅ 1 ಮತ್ತು ಸರ್ವೆ ನಂ. 112/ ಬ 3 ಎರಡು ಜಮೀನುಗಳು ಹೊಂದಿಕೊಂಡಂತೆ ಇವೆ ಎಂದರೆ ಸರಿ. ಸದರಿ ಆಸ್ತಿಗಳ ದಕ್ಷಿಣ ದಿಕ್ಕಿಗೆ ನನ್ನ ಜಮೀನು ಬರುತ್ತದೆ. ಪ್ರತಿವಾದಿಗಳ ಜಮೀನಿಗೆ ನಾಲ್ಕು ದಿಕ್ಕುಗಳಲ್ಲಿ ಬದಗಳು ಇವೆ ಎಂದರೆ ಸರಿ.

2. ಸರ್ವೆ ನಂ. 112/ಅ 1 ರ ಜಮೀನು ಪ್ರತಿವಾದಿಯರ ಹಿರಿಯರಿಗೆ ಭೂನ್ಯಾಯಮಂಡಳಿಯಿಂದ ಮಂಜೂರು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 112/ ಅ 1 ಜಮೀನನ್ನು ಪ್ರತಿವಾದಿಗಳು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿ. ಸರ್ವೆ ನಂ. 112/ ಬ 3 ಮತ್ತು ಸರ್ವೆ ನಂ. 112/ ಅ 1 ರ ಜಮೀನಿಗೆ ಪ್ರತಿವಾದಿಯರ ಹಿರಿಯರು ಭೂನ್ಯಾಯಮಂಡಳಿಗೆ ಸಲ್ಲಿಸಿದ ಅರ್ಜಿಯ ಪ್ರಕಾರ ಕ್ಷೇತ್ರವು ಮಂಜೂರಾಗಿದ್ದು ಅವುಗಳ ಸಂಪೂರ್ಣ ಕ್ಷೇತ್ರದಲ್ಲಿ ವಹಿವಾಟು ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರು ಮೂಲ ಸರ್ವೆ ನಂ. 112 ರಲ್ಲಿ ವಹಿವಾಟು ಮಾಡುತ್ತಿರುವುದು ನನಗೆ ಗೊತ್ತಿದ್ದು ಆದರೆ ಅವರು ವಹಿವಾಟಿನಲ್ಲಿ ಇರುವ ಕ್ಷೇತ್ರ 112/ಅ 1 ಮತ್ತು ಸರ್ವೆ ನಂ. 112/ ಬ 3 ರ ಜಮೀನಿಗೆ ಸಂಬಂಧಿಸಿದ್ದು ಎಂದು ನನಗೆ ಗೊತ್ತಿಲ್ಲ. ನಾನು ಖರೀದಿ ಹಿಡಿದಿದ್ದೇನೆ ಎಂದು ಆಧರಿಸುವ ಜಮೀನಿನ ಉತ್ತರಕ್ಕೆ ಪ್ರತಿವಾದಿಗಳ ಜಮೀನು ಇವೆ ಎಂದರೆ ಸಾಕ್ಷಿ ಸರ್ವೆ ನಂ. 112 ರ ಜಮೀನು ಇದೆ ಎಂದು ನುಡಿಯುತ್ತಾರೆ.

3. ನಾನು ವಿಧ್ಯಾಭ್ಯಾಸ ಮಾಡಿರುವುದಿಲ್ಲ. ನಾನು ಈ ಹಿಂದೆ ಹೇಳಿದ ಚೆಕ್ಕಬಂಧಿಗಳು ಸರಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ಪ್ರಕಾರ ಚೆಕ್ಕಬಂಧಿಯ ಪ್ರಕಾರ ಅವರ ಆಜುಬಾಜಿನ ರೈತರು ಸರಿ ಇದೆ ಎಂದು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಜಮೀನಿನ ಪೂರ್ವಕ್ಕೆ ಇರುವ ಪರಮೇಶಪ್ಪ ಮಾರಣ್ಣನವರು ಪ್ರಮಾಣ ಪತ್ರವನ್ನು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಜಮೀನಿನ ಪಕ್ಕದಲ್ಲಿರುವ ಶಿವಪ್ಪ ಎಂಬುವ ವ್ಯಕ್ತಿಯೂ ಸಹ ಪ್ರಮಾಣ ಪತ್ರವನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಅದೇ ರೀತಿ ಬಸವಂತಪ್ಪ ದೊಡ್ಡಶಿವಣ್ಣ ಅವರು ಸಹ ಪ್ರಮಾಣ ಪತ್ರವನ್ನು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

4. ಪ್ರತಿವಾದಿಯರು ತಮಗೆ ಸೇರಿದ ಜಮೀನುಗಳಲ್ಲಿ ದಾವಾ ಸಲ್ಲಿಸುವ ಕಾಲಕ್ಕೆ ಗೋವಿನಜೋಳ ಬೆಳೆದು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿ. ಸಾಕ್ಷಿಗೆ ಈಗ ನಾಲ್ಕು ಛಾಯಾ ಚಿತ್ರಗಳನ್ನು ತೋರಿಸಿ ಅವುಗಳಲ್ಲಿ ಬೆಳೆದಿರುವ ಗೋವಿನಜೋಳವು ಪ್ರತಿವಾದಿಯ ಜಮೀನಿನಲ್ಲಿ ಬೆಳೆದಿರುತ್ತಾರೆ ಎಂದರೆ ಸಾಕ್ಷಿ ಸದರಿ ಛಾಯಾಚಿತ್ರಗಳಲ್ಲಿ ನೋಡಿದರೆ ಆ ರೀತಿ ಕಾಣುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರು ತಮಗೆ ಸೇರಿದ ಸರ್ವೆ ನಂ. 112/ಅ 1 ಮತ್ತು ಸರ್ವೆ ನಂ. 112/ಬ 3 ರ ಜಮೀನುಗಳಲ್ಲಿ ದಾವಾ ಸಲ್ಲಿಸುವ ಕಾಲಕ್ಕೂ ಮತ್ತು ಈಗಲೂ ಗೋವಿನಜೋಳವು ಬೆಳೆದಿರುತ್ತಾರೆ ಎಂದರೆ ಸಾಕ್ಷಿ ಪ್ರತಿವಾದಿಯರಿಗೆ ಸೇರಿದ 01 ಎಕರೆ 03 ಗುಂಟೆ ಜಮೀನಿನಲ್ಲಿ ಅವರು ವ್ಯವಸಾಯ ಮಾಡುತ್ತಿದ್ದು ನನಗೆ ಗೊತ್ತಿದ್ದು ಆದರೆ ಇನ್ನೂಳಿದ 03 ಎಕರೆ ಜಮೀನಿನಲ್ಲಿ ಪ್ರತಿವಾದಿಯರು ವ್ಯವಸಾಯ ಮಾಡುತ್ತಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಸದರಿ 03 ಎಕರೆ ಜಮೀನನ್ನು ಯಾರು ವ್ಯವಸಾಯ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಮೂಲ ಸರ್ವೆ ನಂ. 112 ರ ಜಮೀನಿನಲ್ಲಿ ಪ್ರತಿವಾದಿಯರು 01 ಎಕರೆ 03 ಗುಂಟೆ ಜಮೀನನ್ನು ಮಾತ್ರ ವ್ಯವಸಾಯ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ.

5. ಸಾಕ್ಷಿಗೆ ನಾಲ್ಕು ಛಾಯಾ ಚಿತ್ರಗಳನ್ನು ತೋರಿಸಲಾಗಿ ಅದರಲ್ಲಿ ಕಾಣುವ ಜಮೀನುಗಳು ಸಮತಟ್ಟಾಗಿವೆ ಎಂದು ಒಪ್ಪಿ ನುಡಿದಿದ್ದರಿಂದ ಅವುಗಳನ್ನು ನಿಡಿ-1 ರಿಂದ ನಿಡಿ-4 ಎಂದು ಗುರುತಿಸಲಾಯಿತು. ಪ್ರತಿವಾದಿಯರು ನನಗೆ ಸೇರಿದ 03 ಎಕರೆ ಜಮೀನನ್ನು ಅತಿಕ್ರಮಣ ಮಾಡಲು ಪ್ರಯತ್ನಿಸಿರುತ್ತಾರೆ. ಆ ರೀತಿ ಅತಿಕ್ರಮಣ ಪ್ರವೇಶ ಮಾಡಲು ಪ್ರಯತ್ನ ಪಟ್ಟಿದ್ದಕ್ಕೆ ಸಂಬಂಧಿಸಿದಂತೆ ನಾನು ಈ ದಾವೆ ಮೂಲಕ ಕಾನೂನು ಕ್ರಮ ಕೈಗೊಂಡಿದ್ದೇನೆ. ನಾನು ಖರೀದಿಸಿದ ಆಸ್ತಿಯು 03 ಎಕರೆ ವಿಸ್ತೀರ್ಣ ಇರುತ್ತದೆ. ಸದರಿ 03 ಎಕರೆ ಆಸ್ತಿಯನ್ನು ನಾನೇ ವಹಿವಾಟು ಮಾಡುತ್ತಿರುತ್ತೇನೆ. ಪ್ರತಿವಾದಿಯರು ತಮಗೆ ಸೇರಿದ ಜಮೀನನ್ನು ಹೊರತುಪಡಿಸಿ ನನಗೆ ಸೇರಿದ ಜಮೀನನ್ನು ವ್ಯವಸಾಯ ಮಾಡಲು ತೊಂದರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಪ್ರತಿವಾದಿಯರು ದಾವಾ ಆಸ್ತಿಯನ್ನು ವ್ಯವಸಾಯ ಮಾಡಲು ತೊಂದರೆ ನೀಡುತ್ತಿಲ್ಲ.

6. ನಾನು ಖರೀದಿಸಿದ್ದೇನೆ ಎಂದು ಹೇಳಲಾದ ಆಸ್ತಿಯು ಇಳಿಜಾರಿನಿಂದ ಕೂಡಿದೆ ಎಂದರೆ ಸರಿಯಲ್ಲ. ಭೂಮಾಲೀಕರಿಗೆ ಸರ್ವೆ ನಂ. 111 ರಲ್ಲಿ ಈಗ ಉಳಿದಿರುವ 30 ಎಕರೆ ಜಮೀನು ಎಲ್ಲಿ ಇದೆ ಎಂದು ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಖರೀದಿಸಿರುವ ಆಸ್ತಿ ಮತ್ತು ದೇಸಾಯಿ ಅವರ ಕುಟುಂಬಕ್ಕೆ ಮಾರಾಟ ಮಾಡಿ ಉಳಿದಿರುವ ಆಸ್ತಿಗಳು ಸರ್ಕಾರಕ್ಕೆ ನಿಹಿತಗೊಂಡಿರುತ್ತವೆ ಎಂದರೆ ಸರಿಯಲ್ಲ. ಕೆಲವರಕೊಪ್ಪ ಗ್ರಾಮದಲ್ಲಿರುವ ಎಲ್ಲ ಇನಾಂ ಜಮೀನುಗಳು ಈಗ ಸರ್ಕಾರಕ್ಕೆ ನಿಹಿತಗೊಂಡಿರುತ್ತವೆ ಎಂದರೆ ಸರಿಯಲ್ಲ. ಸದರಿ ಜಮೀನುಗಳು ಸರ್ಕಾರಕ್ಕೆ ನಿಹಿತಗೊಂಡಿದ್ದರಿಂದ ಅದಕ್ಕೆ ಸಂಬಂಧಿಸಿದಂತೆ ರೈತರು ಮತ್ತು ಸರ್ಕಾರದ ನಡುವೆ ಮಾನ್ಯ ಉಚ್ಚ ನ್ಯಾಯಾಲಯ ಮತ್ತು ಕಂದಾಯ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಇವೆ ಎಂದರೆ ಸರಿಯಲ್ಲ. ಸದರಿ ಇನಾಂ ಜಮೀನುಗಳು ಸರ್ಕಾರಕ್ಕೆ ನಿಹಿತಗೊಂಡಿದ್ದರೂ ಸಹ ನಾನು ಮತ್ತು ನನ್ನ ಅಣ್ಣ ಕಂದಾಯ ಅಧಿಕಾರಿಗಳೊಂದಿಗೆ ಮಿಲಾಫಿ ಮಾಡಿಕೊಂಡು ಸಂಬಂದಪಟ್ಟ ಕಂದಾಯ ದಾಖಲೆಗಳಲ್ಲಿ ಸರ್ಕಾರದ ಹೆಸರನ್ನು ಕಡಿಮೆ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ.

7. ದಾವಾ ಆಸ್ತಿಯನ್ನು ನನ್ನ ಹೆಸರಿನಲ್ಲಿ ಮಾತ್ರ ಖರೀದಿ ಮಾಡಿದ್ದು, ನನ್ನ ಅಣ್ಣ ಖರೀದಿಸಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಖರೀದಿಸಿರುವ ಆಸ್ತಿಯು ಕಬ್ಜಾ ರಹಿತ ಖರೀದಿ ಎಂದರೆ ಸರಿಯಲ್ಲ. ನಾನು ಖರೀದಿಸಿರುವ ಆಸ್ತಿಗೆ ಸಂಬಂಧಿಸಿದಂತೆ ಇದೊಂದೆ ಪ್ರಕರಣ ಬಾಕಿ ಇರುತ್ತದೆ. ಅಸಲು ದಾವಾ ನಂ. 230/16 ರಂತೆ ಇದೇ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದಾನೆ ಎಂದರೆ ಸರಿ. ಸದರಿ ದಾವೆಯನ್ನು ಶಾಶ್ವತ ನಿರ್ಭಂದಕಾಜ್ಞೆಯನ್ನು ಕೋರಿ ಸಲ್ಲಿಸಿದ್ದಾನೆ ಎಂದರೆ ಸರಿ. ನನ್ನ ಮತ್ತು ನನ್ನ ಅಣ್ಣನ ಮೇಲೆ ವಿಶೇಷ ನ್ಯಾಯಾಲಯದಲ್ಲಿ ಎಸ್ ಸಿ ಎಸ್ ಟಿ ಪ್ರಕರಣಗಳು ಇದ್ದವು ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅಣ್ಣ ರಾಜಕೀಯ ಮತ್ತು ಹಣದ ಪ್ರಭಾವವನ್ನು ಉಪಯೋಗಿಸಿಕೊಂಡು ಪ್ರತಿವಾದಿಯರ ಬಡತನ ಉಪಯೋಗಿಸಿಕೊಂಡು ತೊಂದರೆ ನೀಡಲು ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಖರೀದಿಗೆ ನೀಡಿರುವ ವ್ಯಕ್ತಿಗಳಿಗೂ ಸಹ ಯಾವ ಭಾಗದಲ್ಲಿ ಜಮೀನು ಇದೆ ಎಂದು ತಿಳಿಯದೇ ಇದ್ದರೂ ಸಹ ನಾಮಕವಾಸ್ತೆ ಖರೀದಿ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 2013 ರ ಪೂರ್ವದಲ್ಲಿ ನಾನು ಖರೀದಿ ಹಿಡಿದಿರುವ ಮಾಲೀಕರು ಮತ್ತು ಖರೀದಿಸಿದ ನಂತರ ನಾನು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

8. ಸರ್ವೆ ನಂ. 111 ರಲ್ಲಿರುವ 32 ಎಕರೆ ಜಮೀನಿನ ಮಾಲೀಕರು ಸಂಪೂರ್ಣ ಕ್ಷೇತ್ರದಲ್ಲಿ ಗೋವಿನಜೋಳವನ್ನು ಬೆಳೆದಿರುತ್ತಾರೆ. ಸದರಿ ಸಂಪೂರ್ಣ ಕ್ಷೇತ್ರದಲ್ಲಿ ಗೋವಿನಜೋಳ ಬೆಳೆದಿರುತ್ತಾರೆ ಎಂದು ಹುಟ್ಟಿಸಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ 32 ಎಕರೆಯಲ್ಲಿ ಗೋವಿನಜೋಳ ಬೆಳೆದಿರುತ್ತಾರೆ ಎಂದು ನಾನು ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿರುವುದಿಲ್ಲ. ಪ್ರತಿವಾದಿಗಳಿಗೆ ಸರ್ವೆ ನಂ. 112/ ಅ 1 ಮತ್ತು ಸರ್ವೆ ನಂ. 112/ ಬ 3 ರ ಆಸ್ತಿಗಳನ್ನು ಹೊರತುಪಡಿಸಿ ಇತರ ಆಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಹೊರತುಪಡಿಸಿ ಪ್ರತಿವಾದಿಗಳಿಗೆ ಬೇರೆ ಜಮೀನುಗಳು ಇಲ್ಲದೇ ಇರುವುದರಿಂದ ಕೂಲಿ ಕೆಲಸ

ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ 03 ಕಡೆ ಜಮೀನುಗಳಿದ್ದು ಅವುಗಳ ಸರ್ವೆ. ನಂಬರುಗಳು ನನಗೆ ನೆನಪಿಲ್ಲ. ಆ ರೀತಿ ಪ್ರತಿವಾದಿಗಳಿಗೆ ಜಮೀನುಗಳು ಇವೆ ಎಂದು ಮತ್ತು ಸರ್ವೆ . ನಂಬರುಗಳು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಎಂದಿಗೂ ನಾನು ಆಧರಿಸುವ ದಾವಾ ಆಸ್ತಿಯನ್ನು ವಹಿವಾಟು ಮಾಡಲು ತೊಂದರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕಬ್ಜಾ ರಹಿತ ಖರೀದಿ ಪತ್ರ ಮಾಡಿಕೊಂಡು, ದಾವಾ ಆಸ್ತಿಯ ಕಬ್ಜಾವನ್ನು ಪಡೆಯುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಶಾಶ್ವತ ನಿರ್ಭಂದಕಾಜ್ಞೆಯ ಮೂಲಕ ದಾವಾ ಆಸ್ತಿಯ ಕಬ್ಜಾ ಇಲ್ಲದೇ ಇದ್ದರೂ ಸಹ ನಾನು ಕಬ್ಜಾವನ್ನು ಸುಳ್ಳಿನಿಂದ ಸಾಬೀತು ಪಡಿಸಲು ಪ್ರಯತ್ನಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಶುದ್ಧ ಅಸ್ತ್ರದಿಂದ ನ್ಯಾಯವನ್ನು ಕೋರಲು ಬಂದಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ